ನೀರನ್ನು ಚಲ್ಲದೇ ಮತ್ತೆ ಅದೇ ಗುಂಡಿಗೆ ಹಾಕಬೇಕು.

- ಅನುಕೂಲಕರ ವಾತಾವರಣ ಮತ್ತು ಸರಿಯಾದ ನಿರ್ವಹಣೆ ಇದ್ದಲ್ಲಿ ಸಾಮಾನ್ಯವಾಗಿ 20’ x 5’ x 0.5’ ಅಳತೆಯ ಗುಂಡಿಯಿಂದ ಬರುವ ಅಝೋಲಾವನ್ನು ಪ್ರತಿದಿನ 2–3 ದನಗಳಿಗೆ ತಿನ್ನಿಸಬಹುದು.

**ದನಗಳಿಗೆ ತಿನ್ನಿಸುವುದು:**

ಪ್ರತಿದಿನ ಒಂದು ದನಕ್ಕೆ 1.5–2.0 ಕಿಲೋದಷ್ಟು ಅಝೋಲಾವನ್ನು ಹಂತ ಹಂತವಾಗಿ (Split Feeding) ತಿನ್ನಿಸಬೇಕು. ದಾಣಿ ಮಿಶ್ರಣದಲ್ಲಿ ಬೆರೆಸಿ ತಿನ್ನಲಿಕ್ಕೆ ಕೊಡಬೇಕು. ಹೀಗೆ ತಿನ್ನಿಸಿದಾಗ ಸುಮಾರು 10–15% ರಷ್ಟು ಹಾಲಿನ ಇಳುವರಿಯಲ್ಲಿ ಹೆಚ್ಚಳ ಕಂಡುಬರುವುದು ಮತ್ತು ದಾಣಿ ಮಿಶ್ರಣದಲ್ಲಿ ಸುಮಾರು ಶೇ. 15–20 ರಷ್ಟು ಹಿಂಡಿಯ ಅಂಶ ಕಡಿಮೆ ಮಾಡಬಹುದು. ಇದಲ್ಲದೆ ಅಝೋಲಾವನ್ನು ಕೋಳಿ, ಮೊಲ, ಕುರಿ ಮತ್ತು ಆಡುಗಳಿಗೂ ಸಹ ಪೂರಕ ಆಹಾರವಾಗಿ ಒದಗಿಸಬಹುದು.


ಲೇಖಕರು:

**ಡಾ. ವೆಂಕಣ್ಣ ಬಳಗಾನೂರ**
**ಶ್ರೀಮತಿ ಗೀತಾ ಎಸ್. ತಾಮಗಳೆ**
**ಡಾ. ಕೆ.ಪಿ. ಗುಂಡಣ್ಣವರ**
**ಶ್ರೀ. ಹರೀಶ್ ಡಿ. ಕೆ.**
**ಡಾ. ಪ್ರಿಯಾ ಪಿ.**
**ಶ್ರೀ. ಕೃಷ್ಣ ಎಲ್. ನಾಯಕ್**
**ಶ್ರೀ ಕಲ್ಲೇಶ ಡಿ. ಟಿ.**



ಸಂಪಾದಕರು ಹಾಗೂ ಪ್ರಕಾಶಕರು

**ಡಾ. ಗುರುಪ್ರಸಾದ ಜಿ. ಎಸ್.**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು

ಅಕ್ಷರ ಜೋಡಣೆ & ವಿನ್ಯಾಸ

**ರೇಖಾ ಕೆ. ಎನ್.**



ಹೆಚ್ಚಿನ ಮಾಹಿತಿಗಾಗಿ

**ಕೃಷಿ ವಿಜ್ಞಾನ ಕೇಂದ್ರ**
ಹನುಮನಮಟ್ಟಿ – 581115
ತಾ : ರಾಣೇಬೆನ್ನೂರ ಜಿ : ಹಾವೇರಿ
(08373) 253524, 94484–95338
**ವಿದ್ಯನ್ಮಾನ ಅಂಚೆ :**
kvk.Haveri@icar.gov.in
**ಅಂತರಜಾಲ :**
www.kvkhaveri.org


**ಕೃಷಿ ವಿಶ್ವವಿದ್ಯಾಲಯ, ಧಾರವಾಡ**

# ಪಶು ಪಾಲನೆಯಲ್ಲಿ ಅಝೋಲಾದ ಮಹತ್ವ






**ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ**
**ಹನುಮನಮಟ್ಟಿ 581 115**
**ತಾ. ರಾಣೇಬೆನ್ನೂರು, ಜಿ: ಹಾವೇರಿ**


ಸೆಪ್ಟಂಬರ್-2017 ಪ್ರತಿಗಳು: 1000

## ಪಶು ಪಾಲನೆಯಲ್ಲಿ ಅಝೋಲಾದ ಮಹತ್ವ

'ಅಝೋಲಾ' ಇದೊಂದು ನೀರಿನ ಮೇಲೆ ತೇಲುತ್ತ ಬೆಳೆಯುವ 'ಫರ್ನ' ಎಂಬ ವರ್ಗಕ್ಕೆ ಸೇರಿದ ಜಲಸಸ್ಯ. ಈ ಸಸ್ಯದಲ್ಲಿ ಆಶ್ರಯ ಪಡೆದ ನೀಲಿ ಹಸಿರು ಪಾಚಿಯೊಂದಿಗೆ ಇದು ಸಹಜೀವನ ಪದ್ಧತಿಯಲ್ಲಿ ಬೆಳೆಯುತ್ತದೆ.

ಅಝೋಲಾದಲ್ಲಿ ಕಚ್ಚಾ ಸಸಾರಜನಕ (23.5%) ಹಾಗೂ ಅವಶ್ಯ ಅಮೈನೋ ಆಮ್ಲಗಳು ಸಮೃದ್ಧವಾಗಿವೆ. ಅಲ್ಲದೇ ಜೀವಸತ್ವಗಳು ಹಾಗೂ ಲವಣಗಳು ಇವೆ. ಸಾವಯುವ ಪದ್ಧತಿಯಲ್ಲಿ ಬೆಳೆಸಿದ ಅಝೋಲಾವನ್ನು ಹೈನುದನಗಳಿಗೆ ಪೂರಕ ಆಹಾರವಾಗಿ ಒದಗಿಸಿದಾಗ ಹಾಲಿನ ಇಳುವರಿ ಹೆಚ್ಚಿಸಬಹುದು.

## ಅಝೋಲಾ ಬೆಳೆಸುವ ವಿಧಾನ:



- 20' ಉದ್ದ 5' ಅಗಲ 0.5' ಆಳ ಅಳತೆಯ ಆಯತಾಕಾರದ ಗುಂಡಿಯನ್ನು ತೆಗೆಯಬೇಕು. ಗುಂಡಿಯ ತಳವು ಸಮತಟ್ಟಾಗಿರುವಂತೆ ನೋಡಿಕೊಳ್ಳವುದು ಅತ್ಯವಶ್ಯ.
- ಈ ಗುಂಡಿಯಲ್ಲಿ 24' x 8' ಅಳತೆಯ ಪಾಲಿಥೀನ್ ಹಾಳೆಯನ್ನು ಹೊದಿಸಬೇಕು.
- ನಂತರ ಇದರಲ್ಲಿ 3 ಅಂಗಲದಷ್ಟು ದಪ್ಪ ಜರಡಿ ಹಿಡಿದ ಫಲವತ್ತಾದ ಮಣ್ಣನ್ನು ಸಮನಾಗಿ ಹರಡಬೇಕು. ಇದರ ಮೇಲೆ 25 ಕಿಲೋ ಎರೆಹುಳು ಗೊಬ್ಬರವನ್ನು ಸಮನಾಗಿ ಹರಡಬೇಕು.
- ಈ ಪದರಿನ ಮೇಲೆ 50 ರಿಂದ 100 ಗ್ರಾಂ ದಷ್ಟು ಬೇವಿನ ಹಿಂಡಿ ಇಲ್ಲವೇ ಹುಲುಗಲ ಹಿಂಡಿಯನ್ನು ಹಾಕಿ ನೀರನ್ನು ನಿಲ್ಲಿಸಬೇಕು.
- ನೀರು ನಿಲ್ಲಿಸಿದ ಮರುದಿನ ಒಂದು ಕಿಲೋ ತಾಜಾ ಅಝೋಲಾವನ್ನು ನೀರಿನ ಮೇಲೆ ಅಲ್ಲಲ್ಲಿ ಉದುರಿಸಬೇಕು.
- ಅಝೋಲಾ ಹೊಂಡದ ಮೇಲೆ ಹೂ ಬಿಸಿಲು (ಕೌನೆಳ್ಳು)(Partial shade) ಬೀಳುವ ಹಾಗೆ ಚಪ್ಪರ ಹಾಕಬೇಕು.
- 10–15 ದಿನಗಳಲ್ಲಿ ಅಝೋಲಾ ಬೆಳೆದು ನೀರಿನ ಹೊಂಡದ ಮೇಲೆ ಹರಡಿಕೊಳ್ಳುವುದು.
- 20° ಸೆ – 25° ಸೆ ನಲ್ಲಿ ಅಝೋಲಾ ಹುಲುಸಾಗಿ ಬೆಳೆಯುತ್ತದೆ.
- ಅಝೋಲಾದ ಬೆಳವಣಿಗೆಗೋಸ್ಕರ 8–10 ದಿನಕ್ಕೊಮ್ಮೆ ಸುಮಾರು 20 ಗ್ರಾಂ ಶಿಲಾರಂಜಕ(Rocks phosphate)/ಸೂಪರ್ ಫೋಸ್ಪೆಟ್ ಹಾಗೂ 1 ಕಿಲೋ ಸಗಣಿ ರಾಡಿಯನ್ನು ಗುಂಡಿಗೆ ಹಾಕುತ್ತಿರಬೇಕು.
- ಯಾವಾಗಲೂ ಹೊಂಡದಲ್ಲಿ ನೀರು ಇರುವಂತೆ ನೋಡಿಕೊಳ್ಳಬೇಕು.
- ಪ್ರಖರವಾದ ಸೂರ್ಯಪ್ರಕಾಶ ನೇರವಾಗಿ ಅಝೋಲಾದ ಮೇಲೆ ಬೀಳದಂತೆ ಕಾಳಜಿ ವಹಿಸಬೇಕು.
- 6 ತಿಂಗಳಿಗೊಮ್ಮೆ ಹೊಂಡದಲ್ಲಿರುವ ನೀರು ಮತ್ತು ಮಣ್ಣನ್ನು ತೆಗೆದು ಹೊಸದಾಗಿ ಮಣ್ಣು ಮತ್ತು ಎರೆಹುಳು ಗೊಬ್ಬರ ಹಾಕಿ, ನೀರಿನಲ್ಲಿ ಮತ್ತೆ ತಾಜಾ ಅಝೋಲಾವನ್ನು ಹರಡಬೇಕು. ಇದರಿಂದ ಉತ್ಪಾದನಾ ಕ್ಷಮತೆಯನ್ನು ಕಾಪಾಡಬಹುದು.
- ಅಝೋಲಾವನ್ನು 'ಜಾಳಿಗೆ ಕೈ'ಯಿಂದ ತೆಗೆದು ಒಂದು ಬುಟ್ಟಿಯಲ್ಲಿ ಹಾಕಿ 2–3 ಸಲ ನೀರಿನಿಂದ ತೊಳೆಯಬೇಕು. ತೊಳೆದ